ಶ್ರೀ ಜಿ. ಎಸ್. ಬಾಗಲೆಕೋಟಿ.—ನನ್ನ ಕಡೆ ವಿವರಗಳು ಇಲ್ಲಿ ಅದನ್ನು ಕಳಿಸಿಕೊಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿದಿದ್ದರೂ ನಾನು ಎಲ್ಲರಿಗೂ ಅವಕಾಶ ಮಾಡಿಕೊಂಡು ತ್ತಿದ್ದೇನೆ. ಒಬ್ಬರು ಎರಡು ಉಪಪ್ರಶ್ನೆಗಳನ್ನು ಮಾತ್ರ ಕೇಳಬೇಕು. ಮುಂದಿನ ಪ್ರಶ್ನೆಯನ್ನು ಶ್ರೀ ಗೋವಿಂದಗೌಡ ಅವರು ಕೇಳಿ.

ಕೊಪ್ಪ ನರಸಿಂಹರಾಜಪುರ ಮತ್ತು ಶೃಂಗೇರಿಗಳಿಗೆ ವಿದ್ಯುಚ್ಛಕ್ತಿ ಕಾಂಕ್ರೀಟ್ ಕಂಬಗಳನ್ನು ನೆಡುವ ಬಗ್ಗೆ

೭೨ (೨೬೧) ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಭಾರಿ ಕಾಗೂ ಮಧ್ಯಮ ಕೈಗಾರಿಕಾ ಹಾಗೂ ವಿದ್ಯುತ್‌ಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಕೊಪ್ಪ, ನರಸಿಂಹರಾಜಪುರ ಹಾಗೂ ಶೃಂಗೇರಿ ತಾಲ್ಲೂಕುಗಳಲ್ಲಿ ಈ ಹಿಂದೆ ವಿದ್ಯುತ್ ಸರಬರಾಜಿಗಾಗಿ ಹಾಕಿದ ಮರದ ಕಂಬಗಳು ಮಳೆಯಿಂದ ಗೆದ್ದಲು ಹಿಡಿದು ವಿದ್ಯುತ್ ಸರಬರಾಜು ಸಮರ್ಪಕವಾಗಿ ಆಗದೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಏನು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಈ ಉದ್ದೇಶಕ್ಕಾಗಿ ಕಾಂಕ್ರೀಟ್ ಕಂಬಗಳನ್ನು ಸರಬರಾಜು ಮಾಡಲಾಗುವುದೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ)—ಆ) ಕೊಪ್ಪ, ನರಸಿಂಹರಾಜಪುರ, ಶೃಂಗೇರಿ ತಾಲ್ಲೂಕುಗಳಲ್ಲಿ ಬದಲಾಯಿಸ ಬೇಕಾಗಿರುವ ಒಟ್ಟು ಮತ್ತು ೧೯೮೦ ಮರದ ಕಂಬಗಳನ್ನು ಗುರುತಿಸಿದ್ದು ಇಲ್ಲಿವರೆಗೆ ೧೦೧೪ ಕಂಬಗಳ ಬದಲಾವಣೆಗೆ ಅಂದಾಜುಗಳು ಮಂಜೂರಾಗಿವೆ. ೧-೪-೮೫ ರಿಂದ ೩೧-೭-೮೭ರ ವರೆಗೆ ಒಟ್ಟು ೬೨೨ ಕಂಬಗಳನ್ನು ಬದಲಾಯಿಸಲಾಗಿದೆ. ಕೆಲಸವು ಪ್ರಗತಿಯಲ್ಲಿದೆ. ಈ ಕೆಲಸವನ್ನು ಹಂತ ಹಂತವಾಗಿ ಮಾಡಿ ಮುಗಿಸಲಾಗುತ್ತಿದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಸ್ವಾಮಿ. ಕೊಪ್ಪ ನರಸಿಂಹರಾಜಪುರ ಮತ್ತು ಶೃಂಗೇರಿ ಮಲೆನಾಡು ಪ್ರದೇಶದಲ್ಲಿವೆ. ಇದರ ಬಗ್ಗೆ ನಾನು ತಮಗೆ ಹೇಳಬೇಕಾದ ಅವಶ್ಯಕತೆ ಇಲ್ಲ. ಒಹುಶಃ ಈ ಕಂಬಗಳು ಕಾಡಿನಲ್ಲೇ ಹಾಕಿರತಕ್ಕದ್ದು. ಹೆಚ್ಚು ಮಳೆಬೀಳತಕ್ಕಂಥ ಪ್ರದೇಶದಲ್ಲಿ ಹಾಕಿರ ತಕ್ಕದ್ದಾಗಿದೆ. ಒಟ್ಟು ೧೯೮೦ ಕಂಬಗಳ ಪೈಕಿ ಬರೇ ೬೨೨ ಕಂಬಗಳನ್ನು ರಿಪ್ಲೇಸ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಇನ್ನೂ ೧೩೭೮ ಕಂಬಗಳನ್ನು ರಿಪ್ಲೇಸ್ ಮಾಡಬೇಕಾಗಿದೆ. ಈ ಕಂಬಗಳು ಮರದ ಕಂಬಗಳಾಗಿದ್ದು ಗೆದ್ದಲು ಹಿಡಿದಿರುತ್ತವೆ. ಆದ್ದರಿಂದ ಇವುಗಳು ಪರ್ಮನೆಂಟಾಗಿ ಇರ ಬೇಕಾದರೆ ಆರ್.ಸಿ.ಸಿ. ಕಂಬಗಳನ್ನು ಇವುಗಳ ಬದಲಾಗಿ ಹಾಕಬೇಕು. ಹೀಗೆ ಮಾಡದೇ ಇದ್ದರೆ ಅನೇಕ ದಿವಸಗಳ ಕಾಲ ಎಲೆಕ್ಟ್ರಿಸಿಟಿ ಇಲ್ಲದೆ ತೊಂದರೆಯಾಗುತ್ತಿರುವುದನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಆಮೇಲೆ ಕೊಪ್ಪ, ಶೃಂಗೇರಿ, ನರಸಿಂಹರಾಜಪುರ ಈ ಮೂರು ತಾಲ್ಲೂಕು ಗಳಿಗೆ ಒಂದೇ ಸಬ್‌ಡಿವಿಜನ್ ಇದೆ. ಒಂದು ಹಳೆ ಲಾರಿ, ೧೨ ಜನ ಮನೆಗಳು ಇರತಕ್ಕದ್ದು ಇದೆ. ಮೂರು ತಾಲ್ಲೂಕುಗಳ ಮೇಲ್ವಿಚಾರಣೆ ಜವಾಬ್ದಾರಿ ಈ ಸಬ್ ಡಿವಿಜನ್ ಮೇಲೆ ಬಿದ್ದಿರತಕ್ಕದ್ದು ಇದೆ. ಇಷ್ಟು ಮಂದಗತಿಯಲ್ಲಿ ರಿಪ್ಲೇಸ್‌ನ್ನು ಮಾಡಿದರೆ ನಾವು ಜನರಿಗೆ ಉತ್ತರ ಹೇಳುವುದು ಕಷ್ಟವಾಗುತ್ತದೆ. ಆದಷ್ಟು ಬೇಗ ಕಂಬಗಳನ್ನು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆಗಬಹುದು.

ಎನ್.ಜಿ.ಇ.ಎಫ್.ನ ಪೂರಕ ಘಟಕಗಳನ್ನು ಇತರರಿಗೆ ಹಂಚಿರುವ ಬಗ್ಗೆ

೭೪ (೩೧೬) ಶ್ರೀ ಎಂ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಎನ್.ಜಿ.ಇ.ಎಫ್.ನ ಪೂರಕ ಘಟಕಗಳನ್ನು ಸಚಿವರ ಮತ್ತು ಶಾಸಕರ ಸಂಬಂಧಿಗಳಿಗೆ ಹಂಚಲಾಗಿದೆ ಎಂಬುದು ವಾಸ್ತವಾಂಶವೇ ?

ಅ) ಹಾಗಿದ್ದಲ್ಲಿ ಅಂತಹ ಸಚಿವರ ಮತ್ತು ಶಾಸಕರ ಹೆಸರುಗಳನು ತಿಳಿಸಿ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ಪೆದ್ಯುಚಕ್ಕೆ ಮಂತ್ರಿಗಳು).—

ಅ) ಇಲ್ಲ.

ಆ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಎನ್.ಜಿ.ಎಫ್.ನ ಪೂರಕ ಘಟಕಗಳನ್ನು ಕೊಟ್ಟಿರುವ ಒಂದು ಪಟ್ಟಿ ಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಆ ಪಟ್ಟಿಯನ್ನು ನೋಡಿದ್ದೇನೆ. ಒಟ್ಟಿನಲ್ಲಿ ಜನರಪಟ್ಟಿ ಇದೆ.

ಶ್ರೀ ಎಂ. ವೀರಯ್ಯಸ್ವಾಮಿ.—ಶಾಸಕರಿಗೆ ಮತ್ತು ಮಂತ್ರಿಗಳ ಸಂಬಂಧಿಕರಿಗೆ ಕೊಟ್ಟಿದ್ದರೆ, ಇದರಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಈ ಪಟ್ಟಿಯನ್ನು ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ಇದರಲ್ಲಿ ಯಾವ ಸಚಿವರುಗಳ ಮತ್ತು ಶಾಸಕರ ಸಂಬಂಧಿಗಳು ಇಲ್ಲ.

ಕೈ ಮಗ್ಗ ಅಭಿವೃದ್ಧಿ ನಿಗಮ

೭೬ (೧೨೨) ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೂಲಿನ ಕೊರತೆಯಿಂದ ಅಲ್ಲಿ ದುಡಿಯುವ ನೇಕಾರರಿಗೆ ಏನಾದರೂ ತೊಂದರೆಯಾಗಿದೆಯೆ ?

ಆ) ರೋಣ ತಾಲ್ಲೂಕು ಗಜೇಂದ್ರ ಗಡದಲ್ಲಿಯು ಕೈಮಗ್ಗ ಅಭಿವೃದ್ಧಿ ನಿಗಮದ ಶಾಖೆಯಲ್ಲಿ ನಿವೇಶನಕ್ಕಾಗಿ ಮನವಿ ಸಲ್ಲಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಆ ಬಗ್ಗೆ ಪೂರ್ವಭಾವಿಯಾಗಿ ಕೈಗೊಂಡ ಕ್ರಮಗಳೇನು ?

ಈ) ಗದಗ ವರ್ತುಲಕ್ಕೆ ಬರುವ ಗಜೇಂದ್ರ ಗಡದ ಕೈಮಗ್ಗ ಅಭಿವೃದ್ಧಿ ನಿಗಮ ಶಾಖೆಯಲ್ಲಿಯ ನೌಕರರ ಬಗ್ಗೆ ದೂರು ಬಂದಿದ್ದು ನಿಜವಲ್ಲವೇ ? ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಕೈಗಾರಿಕೆಗಳ ಮಂತ್ರಿಗಳು).—

ಅ) ನೂಲಿನ ಅಭಾವದಿಂದ ಹಾಗೂ ನಿಗಮದ ಹಣಕಾಸು ಮುಗ್ಗಟ್ಟಿನಿಂದಾಗಿ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ವ್ಯಾಪ್ತಿಯಲ್ಲಿ ಬರುವ ನೇಕಾರರಿಗೆ ನೂಲನ್ನು ಒದಗಿಸಲು ತೊಂದರೆ ಎದುರಿಸಿರುತ್ತದೆ.

ಆ) ಬಂದಿದೆ.

ಇ) ರೋಣ ತಾಲ್ಲೂಕು ಗಜೇಂದ್ರ ಗಡದಲ್ಲಿ ಕೈಮಗ್ಗ ನೇಕಾರರಿಗೆ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಈ ಯೋಜನೆಯನ್ನು ಡಚ್ ಸರ್ಕಾರದ ಆರ್ಥಿಕ ನೆರವಿನ ೨ನೇ ಹಂತದಲ್ಲಿ ೧೦೦ ವಸತಿ ಹಾಗೂ ಕಾರ್ಯಾಗಾರಗಳನ್ನು ನಿರ್ಮಾಣ ಮಾಡಲು ಯೋಜಿಸಲಾಗಿದ್ದು ಯೋಜನೆಯನ್ನು ರಾಜ್ಯ ಸರ್ಕಾರ, ಭಾರತ ಸರ್ಕಾರ ಮತ್ತು ಡಚ್ ಸರ್ಕಾರಗಳು ಪರಿಶೀಲನೆ ಮಾಡಿ ನಿರ್ಣಯಿಸಲಾಗುವುದು.

ಈ) ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಗಮನಕ್ಕೆ ಬಂದಿದ್ದು ಅಭಿವೃದ್ಧಿ ನಿಗಮವು ಪರಿಶೀಲಿಸುತ್ತಿದೆ.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಮಾನ್ಯ ಅಧ್ಯಕ್ಷರೇ, ಈಗ ನೂಲಿನ ಅಭಾವ ಇದೆ ಎಂದು ಒಪ್ಪಿಕೊಂಡಿದ್ದೀರಿ. ಈ ತೊಂದರೆಯನ್ನು ಎದುರಿಸಲು ಯಾವ ಕ್ರಮ ಕೈಗೊಂಡಿದ್ದೀರಿ.